ಕಾಲೋನಿಯಲ್ಲಿ ಕಟ್ಟಿರುವ ಮನೆಗಳಿಗೆ ವಿದ್ಯುದ್ದೀಕರಣ ಸೌಲಭ್ಯ ಕಲ್ಪಸಲು ಅಧಿಕಾ
ಒದಗಿಸಲಾಗಿದೆಯೇ ಎಂದು ಕೇಳುರುವುದಕ್ಕೆ ಅಂದಾಜು ಸಿದ್ದಪಡಿಸಿದ್ದೇವೆಂದು ಉತ್ತರಿಸಿದ
ಅಲ್ಲದೆ ಮಂಡಳಿಯಲ್ಲಿ ಸಿಬ್ಬಂದಿ ಹಾಗೂ ಸಾಮಗ್ರಿಗಳ ಕೊರತೆಯಿಂದಾಗಿ ಮತ್ತು ವಿದ್ಯುದ್ದೀಕ
ಕಾರ್ಯವನ್ನು ಶೀಘ್ರವಾಗಿ ನಿರ್ವಹಿಸುವ ಸಲುವಾಗಿ ಆಯಾ ಸಂಘ ಸಂಸ್ಥೆಗಳೇ ಮಂಡಳಿಗೆ ಸ
ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸಿ ತಾವೇ ಸ್ವಯಂ ವಿದ್ಯುದ್ದೀಕರಣ ಕಾರ್ಯ ನಿರ್ವಹಿಸಿಕೊಳ್ಳ
ಅನುವು ಮಾಡಿಕೊಡಲಾಗಿದೆಯೆಂದಿದ್ದಾರೆ. ಸುಮಾರು ಐದಾರು ವರ್ಷಗಳ ಹಿಂದೆ ಕಟ್ಟಿರ
ಅಲ್ಲಿನ ಕಾಲೋನಿಗಳಿರಬಹುದು, ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಹಣದ ಕೊರತೆಯಿರುವ
ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ, ಕಟ್ಟಿರುವ ಮನೆಗಳಿಗೆ ವಿದ್ಯುದ್ದೀಕರಣ ಸೌ
ಒದಗಿಸಲು ಕಾರ್ಯವನ್ನು ಈಗಿರುವ ವ್ಯವಸ್ಥೆಯಲ್ಲಿ ಮಂಡಳಿಗೆ ವಹಿಸುತ್ತೇವೆಂದರೆ
ಏನಾಗುತ್ತದೆಂಬುದನ್ನು ಆಲೋಚಿಸಬೇಕು. ಇದಕ್ಕೆ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿ
ಉತ್ತರ ಬಯಸುತ್ತೇನೆ

ಶ್ರೀ ಶರಣಬಸಪ್ಪ ಧರ್ಶನಾಪುರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಆ ಕೆಲಸದ
ಅಂದಾಜು ತಯಾರಾಗಿದೆ. ನಮ್ಮಲ್ಲಿ ಸಿಬ್ಬಂದಿ ಮತ್ತು ಸಾಮಗ್ರಿಯ ಕೊರತೆಯಿರುವುದರಿಂದ
ಕೆಲಸವನ್ನು ಮಾಡಲು ತಡವಾಗಬಹುದು. ಆದ್ದರಿಂದ ತಾವು ನಮಗೆ ಕೊಡಬೇಕಾಗಿರುವ ಸೂಪ
ವಿಷನ್ ಚಾರ್ಜಸನ್ನು ತುಂಬಿ ಆ ಕೆಲಸವನ್ನು ಗುತ್ತಿಗೆದಾರರಿಗೆ ಕೊಟ್ಟು ತಾವೇ ಆ ಕೆಲಸವ
ಮಾಡಿಸಿಕೊಳ್ಳಿ ಎಂದು ನಾವು ಈಗಾಗಲೇ ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಪತ್ರವ
ಬರೆದಿದ್ದೇವೆ. ಅದನ್ನು ಸೂಪರ್‌ವಿಜನ್ ಚಾರ್ಜಸ್ ತುಂಬಿಲ್ಲ. ಅದನ್ನು ತುಂಬಿದ ತಕ್ಷಣ
ನಾವು ಮಂಜೂರಾತಿ ಕೊಡುತ್ತೇವೆ. ಅವರು ಆದಷ್ಟು ಬೇಗ ಕೆಲಸವನ್ನು ಮಾಡಿಕೊಳ್ಳಬಹು

ಶ್ರೀ ಎಸ್. ಶಿವಣ್ಣ : ಕೊಳಚೆ ನಿರ್ಮೂಲನಾ ಮಂಡಳಿಯಿಂದ ಸೂಪರ್‌ವಿಜ
ಹಣವನ್ನು ಕಟ್ಟಿ ಈಗಾಗಲೇ ಒಂದು ವರ್ಷವಾಗಿದೆ. ಅಲ್ಲಿ ಮನೆಗಳನ್ನು ಕಟ್ಟಿ 6-7 ವರ್ಷಗಳಾಗಿ

ಶ್ರೀ ಶರಣಬಸಪ್ಪ ದರ್ಶನಾಪುರ್ : ಹಣವನ್ನು ಕಟ್ಟಿರುವುದು ನಿಜವಾಗಿದ್ದರೆ ಈವ
ಅದಕ್ಕೆ ಮಂಜುರಾತಿ ಕೊಡಿಸುತ್ತೇನೆ.

**ಜಯನಗರ ಕ್ಷೇತ್ರದ ಮಾವಳ್ಳಿಯಲ್ಲಿರುವ ಹಳೆಮಾರ್ಕೆಟನ್ನು ಒಡೆದು ಹೊಸ ಮಾರ್ಕೆ
ನಿರ್ಮಿಸುವುದು.**

388 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರ
ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಜಯನಗರ ವಿಧಾನ ಸಭಾ ಕ್ಷೇತ್ರದ ಮಾವಳ್ಳಿಯಲ್ಲಿರುವ ಹಳೆ ಮಾರ್ಕೆಟನ್ನು ಒಡ
ಹೊಸ ಮಾರ್ಕೆಟ್ ನಿರ್ಮಿಸಲು ಅಂದಾಜು ಪಟ್ಟಿ ತಯಾರಿಸಲಾಗಿದೆಯೇ?*

ಆ) ಹಾಗಿದ್ದಲ್ಲಿ ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಹೌದು.

ಆ) ರೂ. 23.60 ಲಕ್ಷಗಳು.

ಇ) ಹಾಲಿ ಇರುವ ಅಂಗಡಿ ಮಾಲೀಕರಿಗೆ ತಾತ್ಕಾಲಿಕ ಅಂಗಡಿಗಳಿಗೆ ವ್ಯವಸ್ಥೆ ಮಾಡಿ ಕಳೆಯ ಮಾರುಕಟ್ಟೆಯನ್ನು ಕೆಡವಿ ನೂತನ ಮಾರುಕಟ್ಟೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅಧ್ಯಕ್ಷರೆ, ಜಯನಗರ ಕ್ಷೇತ್ರದ ಮಾವಳ್ಳಿ ವಿಭಾಗದಲ್ಲಿ ಮಾರುಕಟ್ಟೆಯನ್ನು ಕಟ್ಟಲು ಸುಮಾರು ನಾಲ್ಕು ವರ್ಷಗಳ ಹಿಂದೆ ಅಂದಾಜು ಸ್ಯಾಂಕ್ಷನ್ ಆಯಿತು, ವರ್ಕ್‌ಆರ್ಡರ್ ಆಯಿತು ಅಡಿಗಲ್ಲನ್ನು ಸಹ ಇಡಲಾಗಿತ್ತು. ಆಗ ನಾನು ಸಚಿವನಾಗಿದ್ದೆ. ಆದರೆ ಇದುವರೆಗೂ ಆ ಕೆಲಸ ಪ್ರಾರಂಭವಾಗಿಲ್ಲ. ಆ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಾ? ಯಾವಾಗ ಮುಗಿಸುತ್ತೀರಿ?

ಶ್ರೀ ಅನಂತ್‌ನಾಗ್ : ಮಾನ್ಯ ಅಧ್ಯಕ್ಷರೆ, 1994-95ನೇ ಸಾಲಿನಲ್ಲಿ ಈ ಮಾರುಕಟ್ಟೆ ಪ್ರಾರಂಭ ಮಾಡಬೇಕೆಂದು ಕೆಲಸ ಪ್ರಾರಂಭಿಸಲಾಯಿತು. ಅಲ್ಲಿದ್ದ ವ್ಯಾಪಾರಿಗಳಿಗೆ ಆ ಮಾರುಕಟ್ಟೆ ಪೂರ್ಣವಾಗುವವರೆಗೆ ತಾತ್ಕಾಲಿಕವಾಗಿ ಕಾಲುದಾರಿಯಲ್ಲಿ ಮಾರುಕಟ್ಟೆ ಮಾಡಿಕೊಡಲಾಗಿತ್ತು. ಆದರೆ ಅದರ ವಿರುದ್ಧ ಕೆಲವರು ಹೈಕೋರ್ಟ್‌ಗೆ ಹೋದರು. ಅನಂತರ ಕಾಲುದಾರಿಯಲ್ಲಿ ಮಾರುಕಟ್ಟೆಯನ್ನು ತಾತ್ಕಾಲಿಕವಾಗಿ ಮಾಡಲು 8 ಲಕ್ಷ ಸ್ಯಾಂಕ್ಷನ್ ಮಾಡಿ, ಕಾಲುದಾರಿ ಯಾವಾಗಲೂ ಕಾಲುದಾರಿಯಾಗಿಯೇ ಇರಬೇಕೆಂದು ಅಂಗಡಿಯವರಿಗೆ ತಾತ್ಕಾಲಿಕವಾಗಿ ಮಾರುಕಟ್ಟೆಯ ಸೌಲಭ್ಯವನ್ನು ಮಾಡಬೇಕೆಂದು ನ್ಯಾಯಲಯದಲ್ಲಿ ಡಚಾರ ವಿಚಾರ ಮೂಡಿಬಂದ ಮೇಲೆ, ಆ ಕೆಲಸವನ್ನು ತೆಗೆದುಕೊಂಡಿದ್ದೇವೆ ಅಷ್ಟರಲ್ಲಿ ಮಾರುಕಟ್ಟೆಯನ್ನು ಮಾಡಬೇಕಾದರೆ ಜಾಯಿಂಟ್ ಸೆಕ್ಟಾರ್‌ನಲ್ಲಿ ಮಾಡಬೇಕೆಂದು ಆಯಿತು. ಕೆಳಹಂತದಲ್ಲಿರುವವರಿಗೇ ಅಂಗಡಿಗಳನ್ನು ಕೊಡಬೇಕಾಗುತ್ತದೆ, ಜಾಯಿಂಟ್ ಸೆಕ್ಟಾರ್‌ನಲ್ಲಿ ಯಾರೂ ಗುತ್ತಿಗೆದಾರರು ಮುಂದೆ ಬರುವುದಿಲ್ಲವೆಂದು ತಿಳಿದಮೇಲೆ ಮತ್ತೆ ಈಗ ಕಾರ್ಪೊರೇಷನ್ನೇ ಆ ಕೆಲಸವನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದೆ. ಈ ಹಿಂದೆ ಆ ಕೆಲಸಕ್ಕೆ ಏನು 15 ಲಕ್ಷವನ್ನು ಕೊಡಲಾಗಿತ್ತು ಅದನ್ನು ಈಗ 23 ಲಕ್ಷದ 60 ಸಾವಿರಕ್ಕೆ ಹೆಚ್ಚಿಸಿ ಟೆಂಡರ್ ಮಾಡಿದ್ದೇವೆ. ಹಾಲಿ ಇರುವ ಅಂಗಡಿಗಳಿಗೆ ತಾತ್ಕಾಲಿಕ ವ್ಯವಸ್ಥೆ ಮಾಡುತ್ತಿದ್ದೇವೆ. ಆ ಕೆಲಸವಾದ ಮೇಲೆ ಮಾರುಕಟ್ಟೆಯನ್ನು ಕಟ್ಟುವ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಅಧ್ಯಕ್ಷರೇ, ಜಯನಗರ ಎರಡನೇ ಬ್ಲಾಕ್‌ನಲ್ಲಿ ಒಂದು ಕಾಂಪ್ಲೆಕ್ಸ್ ಇತ್ತು, ಅದನ್ನು ಒಡೆದುಹಾಕಿ ಅಲ್ಲಿದ್ದವರಿಗೆ ಲಾಲ್‌ಬಾಗ್‌ನ ಕಾಂಪೌಂಡ್ ಹತ್ತಿರ ತಾತ್ಕಾಲಿಕವಾಗಿ ಐವತ್ತು ಜನರಿಗೆ ಅಂಗಡಿಗಳ ಸೌಲಭ್ಯವನ್ನು ಕೊಟ್ಟಿದ್ದೇವೆ. ಎರಡನೇ ಬ್ಲಾಕ್‌ನಲ್ಲಿರುವ ಕಾಂಪ್ಲೆಕ್ಸ್ ಕೆಲಸ ಪೂರ್ಣವಾಗುತ್ತಿದೆ. ಆಗ ಲಾಲ್‌ಬಾಗ್‌ನ ಕಾಂಪೌಂಡ್‌ನ ಹತ್ತಿರ ಇರುವ ಅಂಗಡಿಯವರೆಲ್ಲಾ ಅಲ್ಲಿಗೆ ಶಿಫ್ಟ್ ಆಗುತ್ತಾರೆ. ಆಗ ಮಾವಳ್ಳಿಯ ಹತ್ತಿರ ಇರುವ ಅಂಗಡಿಯವರನ್ನು

ಲಾಲ್‌ಬಾಗ್‌ನ ಕಾಂಪೌಂಡ್ ಹತ್ತಿರ ಇರುವ ಜಾಗಕ್ಕೆ ಹಾಕಿದರೆ ಯಾರಿಗೂ ತೊಂದರೆ ಇರುವುದಿಲ್ಲ. ಮತ್ತೆ ಕೋರ್ಟಿಗೆ ಹೋಗಿ ಸ್ಟೇ ತರುವ ಕೆಲಸ ಯಾರೂ ಮಾಡುವುದಿಲ್ಲ. ಆದ್ದರಿಂದ ಮಾವಳ್ಳಿಯ ಹತ್ತಿರ ಇರುವ ಅಂಗಡಿಯವರನ್ನು ಲಾಲ್‌ಬಾಗ್‌ನ ಹತ್ತಿರ ಇರುವ ಅಶೋಕ ಪಿಲ್ಲರ್ ಬಳಿ ಇರುವ ಅಂಗಡಿಗಳಿಗೆ ಶಿಫ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅನಂತನಾಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪಿಕೊಂಡಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳಲು ಆದೇಶ ನೀಡುತ್ತೇನೆ.

ಸೋಮವಾರ ಪೇಟೆ ತಾಲ್ಲೂಕಿನ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು.

389 - ಶ್ರೀ ಅಪ್ಪಚ್ಚುರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನ ಕುಮಾರ ಹಳ್ಳಿ, ವೆಂಕಳ್ಳಿ, ಕುಡಿಗಾಣ ಹಾಗೂ ಶಿವರಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಅಂದಾಜು ಪಟ್ಟಿ ತಯಾರಿಸಲಾಗಿದೆಯೇ (ವಿವರ ನೀಡುವುದು)?

ಆ) ಹಾಗಿದ್ದಲ್ಲಿ ಯಾವಾಗ ಈ ಮೇಲಿನ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು)

ಅ) ಸೋಮವಾರ ಪೇಟೆ ತಾಲ್ಲೂಕಿನ ಕುಮಾರ, ಹಳ್ಳಿ ಮತ್ತು ಕೊತ್ತನ ಹಳ್ಳಿ ಗ್ರಾಮಗಳ ಪುನರ್ ವಿದ್ಯುದ್ದೀಕಾರಣಕಾಗಿ ರೂ. 10,62,593 ಮೌಲ್ಯದ ಅಂದಾಜು ಪಟ್ಟಿಗೆ ಈಗಾಗಲೇ ಮಂಜೂರಾತಿ ನೀಡಲಾಗಿದೆ. ಬೆಟ್ಟಹಳ್ಳಿ ಗ್ರಾಮದ ಭಾಗಗಳಾದ ಬೆಂಕಿಹಳ್ಳಿ, ಬೀಕಿನ ಹಳ್ಳಿ, ಕುಡಿಗಾಣ ಮತ್ತು ಶಿವರಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ರೂ. 6,54,358 ಮೌಲ್ಯದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಆ) ಕುಮಾರಹಳ್ಳಿ ಮತ್ತು ಕೊತ್ತನಹಳ್ಳಿಗಳ ಪುನರ್ ವಿದ್ಯುದ್ದೀಕರಣ ಕಾರ್ಯವು ಪ್ರಗತಿಯಲ್ಲಿದೆ. ಬೆಂಕಿಹಳ್ಳಿ, ಬೀಕಿನಹಳ್ಳಿ, ಕುಡಿಗಾಣ ಮತ್ತು ಶಿವರಳಿಗಳ ವಿದ್ಯುದೀಕರಣದ ಅಂದಾಜು ಪಟ್ಟಿಗೆ ಮಂಜೂರಾತಿ ದೊರೆತ ನಂತರ ವಿದ್ಯುದ್ದೀಕರಣ ಕಾರ್ಯವನ್ನು ಆದಷ್ಟು ಶೀಘ್ರವಾಗಿ ಕೈಗೊಳ್ಳಲಾಗುವುದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೇ, ಸೋಮವಾರಪೇಟೆ ತಾಲ್ಲೂಕಿನ ಕುಮಾರಹಳ್ಳಿ ಗ್ರಾಮಗಳ ಪುನರ್ ವಿದ್ಯುದ್ದೀಕರಣಕ್ಕಾಗಿ ರೂ. 1062:593 ಮೌಲ್ಯದ ಅಂದಾಜು ಪಟ್ಟಿಗೆ ಈಗಾಗಲೇ ಮಂಜೂರಾತಿ ನೀಡಲಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದ ಮೇಲೆ ಮೊದಲು ಇದಕ್ಕಾಗಿ ಎಷ್ಟು ಖರ್ಚು ಮಾಡಿದ್ದರು? ಮೊದಲು ಹಾಕಿದ್ದ ವಿದ್ಯುತ್ ಉಪಕರಣವೇನಾಯಿತು? ಮಂಜೂರಾತಿ ನೀಡಿದ್ದರೂ ಕೆಲಸವನ್ನೇಕೆ ತೆಗೆದುಕೊಳ್ಳಲಿಲ್ಲ? ಯಾವಾಗ ಕೆಲಸವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಶರಣ ಬಸಪ್ಪ ದರ್ಶನಾಪುರ್ : ಮಾನ್ಯ ಅಧ್ಯಕ್ಷರೆ, ಕುಮಾರನಹಳ್ಳಿ ಮತ್ತು ಕೊತ್ತನ ಹಳ್ಳಿಗಳಲ್ಲಿ 1984ರಲ್ಲಿ ಆರ್.ಇ.ಪಿ ಕಾರ್ಯಕ್ರಮದ ಅಡಿಯಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಲಾಗಿತ್ತು.